‘ನನ್ಗೆ ಈಗ ನನ್ನ ಮೇಲೇನೆ ಅನುಮಾನ ಶುರುವಾಗಿದೆ. ಹಾಗಾದರೆ ನಾನು ನೋಡಿದ್ದು ಭ್ರಮೆಯೇ? ನಾನೇ ಎಲ್ಲವನ್ನೂ ಬಣ್ಣದ ಗಾಜಿನಲ್ಲಿ ನೋಡುತ್ತಿದ್ದೇನಾ? ಥೆರಪಿ ನನಗೆ ಅಗತ್ಯವಿದೆಯೇ? ಐ ಡೋಂಟ್ ನೋ’.

ಎಲ್ಲವನ್ನೂ ಆಲಿಸಿದ ಕೃತ್ತಿಕಾ, ‘ಮುಂಚೆ ನಿವಿ ಹಾಗಿರಲಿಲ್ಲ. ಆದರೆ ನಮ್ಮಿಬ್ಬರ ನಡುವೆ ಸಂಪರ್ಕ ಕಡಿದು ಬಹಳ ವರ್ಷಗಳೇ ಆದವು. ಮುಂಚೆನಿಂದಲೂ ಅವಳು ಸ್ವಲ್ಪ ಅಂತರ್ಮುಖಿ. ಯಾರಲ್ಲೂ ಅವಳು ತನ್ನ ಭಾವನೆಗಳನ್ನು ಶೇರ್ ಮಾಡಿಕೊಳ್ಳುವುದಿಲ್ಲ. ತಾನಾಯಿತು ತನ್ನ ಓದಾಯಿತು. ತನ್ನ ಕೋಣೆಯಾಯಿತು ಅಂತ ಇರ್ತಾಳೆ. ಹಾಗಾಗಿ ಎಷ್ಟೇ ಆತ್ಮೀಯರಾದರೂ ಅವಳೊಡನೆ ನನ್ನ ಬಾಂಡಿಂಗ್ ಬೆಳೆಯಲೇ ಇಲ್ಲ. ಅವಳು ಮುಕ್ತವಾಗಿ ನಕ್ಕಿದ್ದು, ಮಾತನಾಡಿದ್ದು ನಾನು ನೋಡೇ ಇಲ್ಲ. ಅವಳಿಗೆ ಮದುವೇನೆ ಬೇಡ ಅಂದಿದ್ದಳಂತೆ. ಬಟ್ ಕ್ರಮೇಣ ಎಲ್ಲಾ ಆಯಿತು’.

‘ನಾನು ಅವಳಿಗೆ ಬಲವಂತದ ಗಂಡಾ?’

‘ಇಲ್ಲ. ಅಪ್ಪ ಹೇಳ್ತಿದ್ರು. ಯಾರನ್ನು ತೋರಿಸಿದರೂ ಬೇಡ ಅಂತಿದ್ದ ನಿವಿ, ಈ ಹುಡ್ಗನ್ನ ಒಪ್ಪಿದಳು ಅಂತ’.

‘ಮತ್ತೆ ಸಮಸ್ಯೆ ಎಲ್ಲಿದೆ? ನಿಮಗ್ಗೊತ್ತಾ, ಸಿಸಿಟಿವಿ ಅಳವಡಿಸಿದ ಮೇಲೆ ಯಾವ ಅಹಿತಕರ ಪ್ರಸಂಗವೂ ನಡೆದಿಲ್ಲ. ಅವಳು ಎಷ್ಟು ಆತ್ಮವಿಶ್ವಾಸದಿಂದ ಸ್ಪಷ್ಟತೆಯಿಂದ ಮಾತನಾಡುತ್ತಾಳೆಂದರೆ ನನ್ನಲ್ಲೇ ಸಮಸ್ಯೆ ಇದೆ ಎಂದು ಅವಳು ಭಾವಿಸಿದ್ದಾಳೆ. ನಾನು ಸೈಕಾಲಜಿಸ್ಟ್ ಹತ್ತಿರ ಹೇಗೆ ಹೋಗಲಿ?’. ಅವನ ತೊಳಲಾಟ ಅರ್ಥ ಮಾಡಿಕೊಂಡವಳಂತೆ ಕೃತ್ತಿಕಾ ನುಡಿದಳು, ‘ಬಾವ ನಿಮ್ಮ ದಾರಿಯನ್ನು ಅವಳೇ ಸುಲಭ ಮಾಡಿದ್ದಾಳೆ. ಇಬ್ಬರಲ್ಲಿ ಯಾರಿಗೆ ಸಮಸ್ಯೆ ಇದ್ದರೂ ಪರಿಹಾರ ಇಬ್ಬರಿಗೂ ದೊರೆಯುತ್ತದಲ್ಲವೇ? ನೀವೊಮ್ಮೆ ಸಲಹೆ ಪಡೆದರೆ ಎಲ್ಲವೂ ಬಗೆಹರಿಯಬಹುದೆಂದು ನನಗೂ ಅನ್ನಿಸುತ್ತದೆ’ ಎಂದಳು. ಆದರೂ ಪ್ರದೀಪನಿಗೆ ಹೋಗಲು ಏನೋ ಒಂದು ವಿಧವಾದ ಮುಜುಗರ ಬಾಧಿಸಿತ್ತು. ಮೌನದಿಂದ ಅವನ ಮನಸ್ಥಿತಿ ಅರ್ಥ ಮಾಡಿಕೊಂಡಂತೆ ಕೃತ್ತಿಕಾ ಮುಂದುವರೆದು, ‘ಇದರಲ್ಲಿ ಕೀಳರಿಮೆ ಅಥವಾ ಅಳುಕು ಪಡಲೇನೂ ಇಲ್ಲ ಬಾವ. ಈಗಿನ ಒತ್ತಡ ಜೀವನದಲ್ಲಿ ಆಪ್ತ ಸಮಾಲೋಚನೆ ಒಂದು ಸಹಜ ಪ್ರಕ್ರಿಯೆ. ವ್ಯವಧಾನವಿಲ್ಲದ ಜಗತ್ತಿನ ರೇಸ್‌ನಲ್ಲಿ ನಾವು ಓಡುತ್ತಿದ್ದೇವೆ. ಈ ಓಟದಲ್ಲಿ ನಿರೀಕ್ಷೆ, ಘರ್ಷಣೆ ಸಹಜ. ಬಯಸಿದ್ದು ದಕ್ಕದಾಗ ಸೋಲು, ಖಿನ್ನತೆ, ಒತ್ತಡ ನಮ್ಮ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಅದನ್ನು ಬಗೆಹರಿಸಿಕೊಳ್ಳಲು ಈ ಥರ ಥೆರಪಿಗಳು ಬಹಳ ಸಹಾಯಕವಾಗುತ್ತವೆ. ಇನ್ನು ನಿವಿಯ ಸಮಸ್ಯೆ, ಅವಳ ಮನಸ್ಸಿನಾಳಕ್ಕಿಳಿದು ಅದರೊಳಗೇನಿದೆ ಎಂದು ಹುಡುಕಿ ತೆಗೆಯುವುದು ಸೈಕಾಲಜಿಸ್ಟ್ ಹತ್ತಿರ ಮಾತ್ರ ಸಾಧ್ಯ. ಸೋ, ನೀವು ಹೋಗುವುದೇ ಒಳಿತು. ನನಗೆ ಗೊತ್ತಿದ್ದ ಹಾಗೆ ಇದು ವೃತ್ತಿಪರವಾಗಿ ಕೆಲಸ ಮಾಡುತ್ತೆ. ನಿಮಗೆ ಮತ್ತು ಆ ಆಪ್ತ ಸಮಾಲೋಚಕಿಯ ಹೊರತಾಗಿ ಮೂರನೆಯವರಿಗೆ ನಿಮ್ಮ ಸಂಗತಿ ತಿಳಿಯುವುದಿಲ್ಲ. ಹಾಗಾಗಿ ನೀವು ನಾಚಿಕೆ ಪಡುವಂಥದ್ದು ಏನೂ ಇಲ್ಲ’. ಅವಳು ಪ್ರದೀಪನಿಗೆ ತಿಳಿ ಹೇಳುವಂತೆ ನುಡಿದಾಗ ಅವನು ಕಡೆಗೂ ಮನಸ್ಸಿನ ಕಸಿವಿಸಿಯನ್ನೆಲ್ಲಾ ತೊಡೆದು ಆ ಸೆಷನ್‌ಗೆ ಹೋಗಲು ನಿರ್ಧಾರ ಮಾಡಿದ. ಅದನ್ನು ನಿವಿಯ ಬಳಿ ಹೇಳಿಕೊಂಡಾಗ ಅವಳೂ ಪ್ರಸನ್ನಳಾದಳು.

* * *

ಗುರುವಾರ ನಿಗದಿತ ಸಮಯಕ್ಕೆ ನಿವಿ ಮತ್ತು ಪ್ರದೀಪ, ನಿಧಿಯನ್ನು ಪ್ರಭಾವತಿಯ ಸುಪರ್ದಿಗೊಪ್ಪಿಸಿ ಡಾ. ರೂಪಾರನ್ನು ಭೇಟಿಯಾಗಲು ಹೊರಟರು. ಇವರು ಸರಿಯಾದ ಸಮಯಕ್ಕೆ ತಲುಪಿದಾಗ ಡಾ. ರೂಪಾ ಇವರ ಹಾದಿಯನ್ನೇ ಕಾಯುತ್ತಿದ್ದರು.

ನಲವತ್ತೈದರ ಆಸುಪಾಸಿನವರಾಗಿದ್ದ ಡಾ. ರೂಪ ಗೌರವರ್ಣದ ನಗುಮುಖದ ಸ್ನೇಹಪರ ವ್ಯಕ್ತಿತ್ವದ ಮಹಿಳೆ. ಕಂಗಳಲ್ಲೇ ಆತ್ಮೀಯತೆ ಸೂಸುವ ಭಾವವಿದ್ದ ಆಕೆಯ ಮುಖದ ಸ್ನೇಹ ಭಾವಕ್ಕೆ ಸೋತು ಯಾರಾದರೂ ಆಕೆಯ ಬಳಿ ಮನ ಬಿಚ್ಚಿ ಮಾತನಾಡುವ ಹಾಗಿತ್ತು. ಅದೊಂದು ವೃತ್ತಿಪರ ಭೇಟಿಯಾಗಿ ತೋರಗೊಡದೇ, ಸೌಹಾರ್ದವಾಗಿ ಪರಿವರ್ತಿಸುವಂತೆ ಆಕೆ ಸಂಕೋಚವನ್ನು ಹೊಡೆದೋಡಿಸುವ ನಿಟ್ಟಿನಲ್ಲಿ, ‘ಹೇಳಿ ನನ್ನ ಯಾಕೆ ಸ್ಮರಿಸಿಕೊಂಡಿರಿ? ನಿಮಗೆ ಯಾವ ರೀತಿಯ ಗೈಡೆನ್ಸ್ ಕೊಡಬಲ್ಲೆ? ನೀವು ನಿಸ್ಸಂಕೋಚವಾಗಿ ಯಾವ ಮುಚ್ಚುಮರೆಯಿಲ್ಲದೇ ನನ್ನೊಂದಿಗೆ ಯಾವ ವಿಷಯವನ್ನೂ ಹಂಚಿಕೊಳ್ಳಬಹುದು. ನಾವು ಮಾತನಾಡುವ ಸಂಗತಿ ತೀರಾ ಖಾಸಗಿಯಾಗಿ ಉಳಿಯುತ್ತದೆ. ಈ ಕೋಣೆ ಬಿಟ್ಟು ಆಚೆ ಖಂಡಿತವಾಗಿ ಹೋಗುವುದಿಲ್ಲ. ಆ ಆಶ್ವಾಸನೆಯನ್ನು ನಾನು ನೀಡುತ್ತೇನೆ’ ಎಂದರು.

ನಿವಿ, ತಾನೇ ತನ್ನ ಪರಿಚಯ ಹೇಳಿಕೊಂಡು ಪ್ರದೀಪನ ಪರಿಚಯವನ್ನು ಮಾಡಿಕೊಟ್ಟಳು. ಪ್ರದೀಪ ನಿವಿಯೇ ಮಾತನಾಡಲು ಅನುವು ಮಾಡಿಕೊಡುವಂತೆ ಮೌನ ಧರಿಸಿಯೇ ಇದ್ದ.

ಮೊದಲಿಗೆ ಇಬ್ಬರ ಹೆಸರು, ವಿದ್ಯಾರ್ಹತೆ, ವಯಸ್ಸು, ವೃತ್ತಿ, ಮದುವೆಯಾಗಿ ಕಳೆದ ಸಮಯ, ಹೀಗೆ ಸುತ್ತು ಬಳಸಿ ಮಾತನಾಡಿಸಿ, ಅವರ ಮಾಹಿತಿಗಳನ್ನೆಲ್ಲವೂ ತಮ್ಮ ಡೈರಿಯಲ್ಲಿ ದಾಖಲಿಸಿಕೊಂಡರು. ಅದೆಲ್ಲವನ್ನೂ ನಿವೇದಿತಾಳೇ ಉತ್ತರಿಸಿದ್ದ ಕಾರಣ ಆಗಲೂ ಪ್ರದೀಪ ಮೂಕ ಪ್ರೇಕ್ಷಕನಾಗಿಯೇ ಉಳಿದ.

ನಿವೇದಿತಾ ನವಿರಾಗಿ ಕೆಮ್ಮಿ ಗಂಟಲು ಸರಿ ಮಾಡಿಕೊಂಡಳು. ಒಮ್ಮೆ ಗಟ್ಟಿಯಾಗಿ ಕಣ್ಮುಚ್ಚಿ ಹೇಳಬೇಕಾದುದನ್ನು ಮನನ ಮಾಡಿಕೊಂಡವಳು ಪ್ರದೀಪನ ಕಡೆ ತಿರುಗಿ ಅವನ ಅಂಗಿ ಒತ್ತಿ ಹಿಡಿದು, ‘ಪ್ರದೀಪ್, ಈಗ ನಾನು ಹೇಳುವುದೆಲ್ಲವೂ ನಿನಗೆ ಅಸಮಂಜಸವಾಗಿ ತೋರಬಹುದು. ಆದರೆ ಪ್ಲೀಸ್ ಇದೇ ಸತ್ಯ. ನೀನು ಒಪ್ಪಿಕೊಳ್ಳಲೇ ಬೇಕು. ನೀವು ಅರ್ಥ ಮಾಡಿಕೊಂಡು ಈಗ ಸಹಕರಿಸಬೇಕು’ ಎಂದಳು ಆರ್ತಳಾಗಿ. ಪ್ರದೀಪ ಕಣ್ಣಲ್ಲೇ ಆಗಲೆನ್ನುವಂತೆ ಸಂಜ್ಞೆ ಮಾಡಿದ. ನಿವೇದಿತಾ ಡಾ. ರೂಪಾ ಅವರ ಕಡೆ ತಿರುಗಿ, ‘ನನಗೆ ಇದು ನಿಜಕ್ಕೂ ಕಷ್ಟದ ಮತ್ತು ಸಂದಿಗ್ಧದ ಸ್ಥಿತಿ ಮೇಡಮ್. ಆದರೆ ನಿಮ್ಮ ಬಗ್ಗೆ ಬಹಳ ನಿರೀಕ್ಷೆಗಳನ್ನು ಇಟ್ಟುಕೊಂಡು ಬಂದಿದ್ದೇವೆ’ ಎಂದಳು.

‘ಹೇಳಿ ಪ್ಲೀಸ್’ ಎಂದು ಒತ್ತುಕೊಡುವಂತೆ ನುಡಿದರು ಡಾ. ರೂಪಾ.

‘ನಮ್ಮಿಬ್ಬರ ಮದುವೆಯಾಗಿ ಮೂರು ವರ್ಷಗಳಾಗುತ್ತಾ ಬಂದಿತು. ಬಟ್ ಇವರು ಈಗೀಗ ಬಹಳ ಬದಲಾಗಿದ್ದಾರೆ. ನನ್ನ ಬಗ್ಗೆ ಆಸಕ್ತಿ ಕಡಿಮೆಯಾಗಿದೆ. ಈಗೀಗ ನನ್ನಿಂದ ದೂರವಾಗಲು ಬಹಳ ಯತ್ನಿಸುತ್ತಿದ್ದಾರೆ. ನನ್ನ ಮೇಲೆ ಇಲ್ಲಸಲ್ಲದ ಅಪವಾದಗಳನ್ನು ಹೊರೆಸಿದ್ದಾರೆ. ಅದು ನಂತರ ನನಗೆ ಗೊತ್ತಾಯಿತು. ನನ್ನನ್ನು ನನ್ನ ತವರು ಮನೆಯಲ್ಲಿ ಬಿಟ್ಟು ಬಂದಿದ್ದರು. ಆಗಾಗ ಟೂರ್ ಎಂದು ಹೋಗುತ್ತಿರುತ್ತಾರೆ. ನಾನೇನೂ ಇವರ ಬಗ್ಗೆ ಅನುಮಾನಗಳನ್ನು ಇರಿಸಿಕೊಂಡಿಲ್ಲ. ನನಗೆ ಇವರ ಬಗ್ಗೆ ಸಂಪೂರ್ಣವಾದ ನಂಬಿಕೆ ಇದೆ. ಆದರೆ ಇವರಿಗೆ ಮನೆಯಲ್ಲೇ ಇರುವ ನನ್ನ ಬಗ್ಗೆ ಇಲ್ಲಸಲ್ಲದ ಅನುಮಾನಗಳು. ಅದು ಎಷ್ಟರಮಟ್ಟಿಗೆಂದರೆ ನನ್ನ ತೇಜೋವಧೆ ಮಾಡುವಷ್ಟು. ನನ್ನ ಮೇಲೆ ಕಾವಲಿರಿಸಲು ಒಬ್ಬ ಸಹಾಯಕಿಯನ್ನು ನೇಮಿಸಿದ್ದಾರೆ ಮತ್ತು ನೀವು ನಂಬುತ್ತೀರೋ ಬಿಡ್ತೀರೋ ಮನೆಯೊಳಗೆ ಹಾಲ್ ಮತ್ತು ಬೆಡ್ ರೂಮಿನಲ್ಲಿ ಸಿಸಿಟಿವಿ ಅಳವಡಿಸಿದ್ದಾರೆ. ನನಗೆ ಹೇಗನಿಸಬೇಡ? ಅವರ ಸಮ್ಮುಖದಲ್ಲೇ ಎಲ್ಲವನ್ನೂ ಹೇಳಿದ್ದೇನೆ. ಸೋ, ನೀವು ಇದಕ್ಕೆ ಪರಿಹಾರ ಕೊಡಬೇಕು. ನಾನು ಇವರಿಗೆ ಅನುಮಾನ ಬರುವಂತೆ ಯಾವತ್ತೂ ನಡೆದುಕೊಂಡಿಲ್ಲ. ಇವರು ಯಾಕೆ ಹೀಗೆ ಆಡ್ತಿದ್ದಾರೆ ನನಗೂ ಗೊತ್ತಿಲ್ಲ’ ಎಂದು ಒಂದೇ ಉಸಿರಿನಲ್ಲಿ ಉದ್ವೇಗದಿಂದ ಎಲ್ಲವನ್ನೂ ಕಾರಿ ಹಗುರಳಾದಳು ನಿವೇದಿತಾ.

ಡಾ. ರೂಪಾ ಎಲ್ಲವನ್ನೂ ತಾಳ್ಮೆಯಿಂದ ಆಲಿಸಿದರು. ನಿವೇದಿತಾ ತನ್ನ ಮಾತಿಗೆ ಯಾವ ಪ್ರತಿಕ್ರಿಯೆಯನ್ನೂ ನೀಡದೇ ಗಂಭೀರವದನನಾಗಿ ಕುಳಿತಿದ್ದ ಪತಿಯತ್ತ ಅಚ್ಚರಿಯಿಂದ ನೋಡಿದಳು. ಅವನು ಇನ್ನೂ ಏನೂ ಹೇಳದೇ ಕುಳಿತಿದ್ದು ಅವಳಿಗೆ ಅಚ್ಚರಿಯ ಸಂಗತಿಯಾಗಿತ್ತು.

‘ಯಾಕೆ ಏನೂ ಹೇಳ್ತಿಲ್ಲ, ಮನೇಲಿ ಅಷ್ಟೆಲ್ಲಾ ಒದರಾಡ್ತೀರಿ. ಈಗೇಕೆ ಈ ಸಭ್ಯತೆಯ ಸೋಗು. ಬಾಯಿ ತೆರೆದು ಮಾತನಾಡಿ’. ಪ್ರದೀಪನ ಮೌನ ಅವಳಿಗೆ ಚಡಪಡಿಸುವಂತೆ ಮಾಡಿತ್ತು. ಡಾ. ರೂಪಾ ಎಲ್ಲವನ್ನೂ ಸೂಕ್ಷ್ಮವಾಗಿ ಅವಲೋಕಿಸುತ್ತಲೇ ಇದ್ದರು.

‘ನಿವೇದಿತಾ, ಅವರಿಗೆ ಹೇಳುವ ಸರದಿ ಬಂದಾಗ ಅವರು ಮಾತನಾಡುತ್ತಾರೆ. ನಿಮಗೆ ಇನ್ನೇನಾದರೂ ನಿರ್ದಿಷ್ಟವಾಗಿ ಹೇಳುವುದಿದೆಯೇ?’

‘ಹ್ಞಾಂ, ಹೌದು ಮೇಡಮ್. ಇವರ ಎಲ್ಲಾ ಅಪವಾದಗಳನ್ನು ನಾನು ಸಹಿಸಬಲ್ಲೆ. ಆದರೆ ಆ ಒಂದು ಆರೋಪವನ್ನು ನಾನು ಖಂಡಿತವಾಗಿ ಸ್ವೀಕರಿಸಲಾರೆ’ – ಅಷ್ಟು ಹೇಳುವಾಗ ನಿವೇದಿತಾಳ ಕಂಗಳು ತುಂಬಿ ಬಂದವು. ದನಿ ಭಾರವಾಯಿತು.

‘ಇದು ಇವರ ಸಣ್ಣತನದ ಪರಮಾವಧಿ. ಇದಕ್ಕೆ ಕ್ಷಮೆಯೇ ಇಲ್ಲ’ ಎಂದಳು. ಡಾ. ರೂಪಾ